# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ: 5041/2022** ಪ್ರಾಸಾ-04

ಚಾಸಾ-04

ದಿನಾಂಕ:21-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ನರಸಿಂಹಮೂರ್ತಿ ಅಲಿಯಾಸ್ ಮೂರ್ತಪ್ಪ |
| **ತಂದೆಯ ಹೆಸರು** | ಲಕ್ಷ್ಮೀನರಸಪ್ಪ |
| **ವಯಸ್ಸು** | 52 ವರ್ಷ |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ತಿಂಗಳೂರು |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ಸಮಾರು 1 ವರ್ಷಗಳ ಹಿಂದೆ ನಾನು ಮತ್ತು ಊರಿನವರು ಎಲ್ಲರೂ ಸೇರಿ ನಮ್ಮ ಊರಿನ ಜಾತ್ರೆಯ ಬಾಬ್ತು ತಿಂಗಳೂರಿನ ಡೈರಿ ಮುಂಭಾಗ ನಾಗರಕಟ್ಟೆಯ ಬಳಿ ಮಧ್ಯಾಹ್ನ ಮಾತನಾಡುತ್ತಿದ್ದೇವು. ನಾವು ಮಾತನಾಡುತ್ತಿದ್ದಾಗ ಗಾರ್ಮೆಂಟ್ಸ್ ಕಂಪನಿಗೆ ಹೋಗುವ ಬಸ್ಸಿನ ಡ್ರೈವರ್ ಆ ದಾರಿಯಲ್ಲಿ ಬಂದು ರಸ್ತೆಯಲ್ಲಿ ಒಂದು ಹೆಣ ಬಿದ್ದಿದ್ದೆ ರಕ್ತ ಬರುತ್ತಿದ್ದೆ, ಸತ್ತು ಹೋದ ಹಾಗೆ ಇದೆ ಎಂದು ಹೇಳಿದ. ಅಷ್ಟರಲ್ಲಿ ಕೆಲ ಹುಡುಗರು ಅಲ್ಲಿ ಹೋಗಿ ನೋಡಿಕೊಂಡು ಬಂದು ಸತ್ತು ಹೋಗಿದ್ದಾನೆ ಎಂದು ಹೇಳಿದರು. ಅವರು ಯಾಕಾಲ್ಲಾರ್ ಹಳ್ಳಿ ರೋಡ್ ಬಳಿಗೆ ಹೋಗಿ ಹೆಣವನ್ನು ನೋಡಿಕೊಂಡು ಬಂದರು. ಅವರು ಬಂದು ಯಾರೋ ಹೊಡೆದು ಹಾಕಿದ್ದಾರೆ ಎಂದು ಹೇಳಿದರು.

ಬಳಿಕ ನಾವು ಪಂಚಾಯಿತಿ ಯವರೆಲ್ಲ ಆ ಜಾಗಕ್ಕೆ ಹೋಗಿ ನೋಡಿದೇವು ರಸ್ತೆಯಲ್ಲಿ ರಕ್ತ ಹರಿದಿತ್ತು ಆದರೆ ಹೆಣ ಇರಲಿಲ್ಲ. ಸತ್ತು ಹೋದ ವ್ಯಕ್ತಿ ಯಾರು ಎಂದು ನನಗೆ ಗೊತ್ತಾಗಲಿಲ್ಲ ಅವರ ಸಾವಿಗೆ ಯಾರು ಎಂದು ನನಗೆ ತಿಳಿಯಲಿಲ್ಲ. ಊರಿನಲ್ಲಿ ಆ ವ್ಯಕ್ತಿಯನ್ನು ಯಾರೋ ಸಾಯಿಸಿದ್ದಾರೆಂದು ಮಾತನಾಡುತ್ತಿದ್ದಾರೆ ಆದರೆ ಯಾರು ಸಾಯಿಸಿದ್ದು ಎಂದು ನನಗೆ ಗೊತ್ತಾಗಲಿಲ್ಲ. ಈ ವಿಚಾರದಲ್ಲಿ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :-</u>**

ದಿನಾಂಕ: 25-08-2022 ರಂದು ರಾತ್ರಿ 10-30 ಗಂಟೆಯ ಸಮಯದಲ್ಲಿ ಜಾಕಿ ಗಾರ್ಮೆಂಟ್ಸ್ ಕಂಪನಿಯ ಬಸ್ಸ್ ಚಾಲಕ ಸಂತೋಷ ನಮಗೆ ಸೋಲಾರ್ ಪಾರ್ಕ್ ಮುಂಭಾಗ ಯಾರೋ ಅಪಘಾತವಾಗಿ ಬಿದ್ದಿರುತ್ತಾರೆಂದು ಹೇಳಿದ ಎಂದರೆ ಸರಿ. ತಕ್ಷಣ ನಾನು ನರೇಶ, ಚಾಸಾ 2 ಬಾಬು, ಚಾಸಾ 3 ನರಸೇಗೌಡ, ಚಾಸಾ 5 ಲಿಂಗರಾಜು ಆ ಸ್ಥಳಕ್ಕೆ ಹೋದೆವು ಎಂದರೆ ಸರಿ. ನಾವು ಅಲ್ಲಿಗೆ ಹೋದಾಗ 25-30 ವಯಸ್ಸಿನ ಗಂಡಸು ರಸ್ತೆಯ ಮೇಲೆ ಬಿದ್ದಿದ್ದ ಅವನನ್ನು ಎತ್ತಿ ನೋಡಿದಾಗ ತಲೆಯ ಹಿಂಭಾಗ ಮುಖ ಮತ್ತು ಕಿವಿಯ ಬಳಿ ರಕ್ತ ಗಾಯವಾಗಿತ್ತು , ಕಿವಿ ಮತ್ತು ಮೂಗಿನಿಂದ ರಕ್ತ ಬರುತ್ತಿತ್ತು, ಪಕ್ಕದಲ್ಲಿ ದ್ವಿಚಕ್ರ ವಾಹನ ಹಿರೋ ಹೊಂಡಾ KA-17-H-2246 ಇತ್ತು ಎಂದರೆ ಸರಿಯಲ್ಲ. ನಾನು ತಕ್ಷಣ ಹೆಣವನ್ನು ಚಾಸಾ 2 ರವರ ಜೊತೆ ಯಾವುದೋ ವಾಹನದಲ್ಲಿ ಮಧುಗಿರಿಯ ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಬಾಬು ಹೆಣವನ್ನು ಆಸ್ಪತ್ರೆಗೆ ಸಾಗಿಸುವಾಗ ಮಧ್ಯ ಎ.ಎಸ್.ಐ ಚಾಸಾ 46 ರವರು ಸಿಕ್ಕಿ ಹೆಣವನ್ನು ಆಸ್ಪತ್ರೆಗೆ ಸಾಗಿಸಿದರು ಎಂದು ಬಾಬು ಹಿಂದಿರುಗಿ ಬಂದು

ಹೇಳಿದ ಎಂದರೆ ಸರಿಯಲ್ಲ. ಸತ್ತ ವ್ಯಕ್ತಿಯ ಹೆಸರು ಸುದೀಪ ರಾಮಾಪುರ ಗ್ರಾಮ ಎಂದು ಗೊತ್ತಾಯಿತು ಎಂದರೆ ಸರಿ. ಈ ಬಗ್ಗೆ ನಾನು 30-05-2022 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು 30-05-2022 ರಂದು ನಿರಾಕರಿಸಿದ ಕಾರಣ ನಿಪಿ 12 ಎಂದು ಗುರುತಿಸಲಾಯಿತು.

ದಿನಾಂಕಃ 20-06-2022 ರಂದು ನಾನು ಪೋಲೀಸರ ಮುಂದೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆ ಹೇಳಿಕೆಯಲ್ಲಿ ಚಲಪತಿ, ಸುದೀಪ ಮತ್ತು ಶಿವಕುಮಾರ ಮತ್ತು ನಾಗೇಶ ಮೊಲ ಬೇಟೆಗೆ ಹೋಗಿದ್ದರು, ಮಾಂಸದ ವಿಚಾರದಲ್ಲಿ ಅವರವರಿಗೆ ಜಗಳವಾಗಿ ಚಲಪತಿ ಸುದೀಪನಿಗೆ ನಾಡ ಬಂದುಕಿನ ಹಿಂಬದಿಯಿಂದ ತಲೆಗೆ, ಕಿವಿ ಮತ್ತು ಕುತ್ತಿಗೆಗೆ ಬಲವಾಗಿ ಹೊಡೆದು ಕೊಲೆ ಮಾಡಿ ಬಳಿಕ ಕೊಲೆಯ ವಿಚಾರವನ್ನು ಮರೆ ಮಾಚುವ ಉದ್ದೇಶದಿಂದ ಅಪಘಾತವೆಂಬಂತೆ ಬಿಂಬಿಸಲು ಹೆಣವನ್ನು ಎಲ್ಲರೂ ಸೇರಿ ರಸ್ತೆಗೆ ಎಳೆದು ತಂದು ರಸ್ತೆಯ ಮಧ್ಯ ಹಾಕಿ, ಸುದೀಪನ ದ್ವಿಚಕ್ರವಾಹನವನ್ನು ಕೂಡ ಅಲ್ಲಿಗೆ ತಂದು ಜಕಮ್ ಗೊಳಿಸಿ ಸುದೀಪ ರಸ್ತೆ ಅಪಘಾತದಿಂದ ಮೃತ ಪಟ್ಟ ಎಂಬಂತೆ ಬಿಂಬಿಸಿದರು ಎಂದು ಗೊತ್ತಾಯಿತು ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ 20 -06-2022 ರ ಮರು ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ 13 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ಮಾಹಿತಿ ಗೊತ್ತಿದ್ದು ಚಲಪತಿ ಮತ್ತು ಉಳಿದ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಊರಿನಿಂದ ಸೊಲಾರ್ ಪಾರ್ಕ್ ಅರ್ಧ ಕಿಲೋ ಮೀಟರ್ ದೂರ ಇದೆ.

<u>ಪಾಟೀಸವಾಲು ಶ್ರೀ. ಪಿ.ಸಿ.ಕೆ.ಆರ್. ವಕೀಲರಿಂದ ಆರೋಪಿಗಳ ಪರವಾಗಿಃ-</u>

ಪಾಟೀಸವಾಲು ಇಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**

**ಈ ಪ್ರಕರಣದಲ್ಲಿ ಸಾಕ್ಷಿ ವಿಚಾರಣೆಯನ್ನು ಕಲಂ.299 Cr.P.C., ಅಡಿಯಲ್ಲಿ ಮಾಡಿದ್ದರಿಂದ ಪಾಟೀಸವಾಲು ಇರುವುದಿಲ್ಲ.**

**U/sec.299 Cr.P.C., ಅಡಿಯಲ್ಲಿ ಸಾಕ್ಷಿಯನ್ನು ಕರೆಸಿ ವಿಚಾರಣೆ ಮಾಡಲಾಯಿತು.**